

ಬೀಜಿಂಗ್ ನಗರ

ಚೀನಾ ನಮ್ಮ ನೆರೆಯ ರಾಷ್ಟ್ರವಾದರೂ ಕೆಲವು ವರ್ಷಗಳ ಹಿಂದಿನವರೆಗೂ ವಿದೇಶೀಯರಿಗೆ ಹಲವಾರು ಗೌಪ್ಯಗಳನ್ನು ತನ್ನ ಬೃಹತ್ ಗೋಡೆಗಳ ಹಿಂದೆ ಅಡಗಿಸಿಕೊಂಡಂತೆ ಭಾಸವಾಗುತ್ತಿತ್ತು. ಅಲ್ಲಿಯ ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ಶ್ರೀಮಂತಿಕೆ ಕಮ್ಯುನಿಸಂ ಆಡಳಿತದ ಮಧ್ಯೆ ಹೂತುಹೋದಂತಿತ್ತು. ಚೀನೀಯರೆಂದರೆ ನೆಲದ ಮೇಲೆ ಹರಿದಾಡುವ, ಆಕಾಶದಲ್ಲಿ ಹಾರಾಡುವ, ನೀರಿನಲ್ಲಿ ಈಜಾಡುವ ಎಲ್ಲಾ ಜೀವಜಂತುಗಳನ್ನೂ ಸ್ವಾಹಾ ಮಾಡಿ ಜೀರ್ಣಿಸಿಕೊಳ್ಳುವವರು ಎಂಬ ಭಾವನೆ ಬಹುತೇಕರಲ್ಲಿತ್ತು.

ಆದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಚೀನಾದ ಅಗ್ಗದ ಗ್ರಾಹಕ ವಸ್ತುಗಳು ಭಾರತದ ಮಾರುಕಟ್ಟೆಗೆ ಪ್ರವಾಹೋಪಾದಿಯಲ್ಲಿ ಹರಿದು ಬಂದ ಮೇಲೆ ಅಲ್ಲಿಯ ತಂತ್ರಜ್ಞಾನ, ಕೈಗಾರಿಕೆ ಕುರಿತು ಕ್ರಮೇಣ ಕುತೂಹಲ ಮೂಡಲಾರಂಭಿಸಿದ್ದಂತೂ ಹೌದು. ಆಗಾಗ ಭಾರತದ ಜೊತೆ ಗಡಿಯಲ್ಲಿ ಸಣ್ಣಪುಟ್ಟ ತಂಟೆ ಎಬ್ಬಿಸುತ್ತ ನಾಯಕನಂತೆ ವರ್ತಿಸುತ್ತಿರುವ ಅದರ ಈಗಿನ ಅಭಿವೃದ್ಧಿಯ ವೇಗವನ್ನು ನೋಡಿದರೆ ಅಮೆರಿಕವನ್ನು 'ದೊಡ್ಡಣ್ಣ'ನ ಸ್ಥಾನಮಾನದಿಂದ ಕಿತ್ತು ಹಾಕಿ ಅಲ್ಲಿ ಚೀನಾದ ಕೆಂಪು ಬಣ್ಣವನ್ನು ಢಾಳಾಗಿ ಬಳಿಯುವ ದಿನಗಳು ದೂರವಿಲ್ಲ ಎನಿಸುತ್ತದೆ.

ಇಡೀ ವಿಶ್ವವೇ ತಮ್ಮ ಮಾರುಕಟ್ಟೆ ಎನ್ನುವ ಯೋಜನೆಯನ್ನು ಅನುಷ್ಠಾನಗೊಳಿಸಿ ಮುನ್ನಡೆಯುತ್ತಿರುವ ಈ ದೇಶವನ್ನು ನೋಡಬೇಕೆನ್ನುವ ಕುತೂಹಲ, ಬಯಕೆ ಇತ್ತೀಚೆಗಷ್ಟೇ ಈಡೇರಿತು.

ಮುಂಬೈನಿಂದ ಬೀಜಿಂಗಿಗೆ 8 ಗಂಟೆಗಳ ಪ್ರಯಾಣ. ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ತಪಾಸಣೆ ಇತ್ಯಾದಿಗಳನ್ನು ಮುಗಿಸಿ ಹೊರಬರುತ್ತಿದ್ದಂತೆ ನಮ್ಮ ಮಾರ್ಗದರ್ಶಿಯಾದ ಹಸನ್ಮುಖಿ ಚೀನಾ ಯುವತಿ ಚೆಂಗ್ 'ನೀ ಹಾ' ಎಂದು ಸ್ವಾಗತಿಸಿದಳು. ಲವಲವಿಕೆಯಿಂದ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದ ಅವಳ ಉಚ್ಚಾರಣೆಯಲ್ಲಿ ಸ್ಥಳೀಯ ಭಾಷೆಯ ಪ್ರಭಾವವಿದ್ದರೂ ಅರ್ಥವಾಗುವಂತಿತ್ತು. ಆಕೆ ಮ್ಯಾಂಡರಿನ್ ಭಾಷೆಯ ಬಗ್ಗೆ ಅಲ್ಪಸ್ವಲ್ಪ ತಿಳಿವಳಿಕೆ ಕೊಟ್ಟು, ನಿತ್ಯದ ಚಟುವಟಿಕೆಗಳಲ್ಲಿ ಬಳಸುವ ಕೆಲವು ಸಾಮಾನ್ಯ ಸಂಭಾಷಣೆಗಳನ್ನು ಕಲಿಸುವುದಾಗಿ ಭರವಸೆ ಕೊಟ್ಟಳು.

ಮ್ಯಾಂಡರಿನ್ ಭಾಷೆಯಲ್ಲಿ 'ನೀ ಹಾ' ಎನ್ನುವುದು ಇಂಗ್ಲಿಷ್‌ನಲ್ಲಿ ಹೆಲೋ ಎಂದಂತೆ. 'ಹೌ ಆರ್ ಯು?' ಅಂತ ಇಂಗ್ಲಿಷ್‌ನಲ್ಲಿ ಕೇಳಬೇಕಾದರೆ 'ನೀ ಹಾ ಮ?' ಎನ್ನಬೇಕಷ್ಟೆ. ಇಂತಹ ಹಲವಾರು ಸಾಮಾನ್ಯ ವಾಕ್ಯಗಳನ್ನು ಕೆಲವೇ ನಿಮಿಷಗಳಲ್ಲಿ ಚೆಂಗ್ ನಮಗೆ ಕಲಿಸಿ ನಮ್ಮ ವಿಶ್ವಾಸವನ್ನು ಗಳಿಸಿದಳು.

ಎಷ್ಟಿದ್ದರೂ ಮಾತೃಭಾಷೆಯ ಅಭಿಮಾನ ವಿಶ್ವವ್ಯಾಪಿ ತಾನೇ. ಚೀನಾದಲ್ಲಿ ಹೆಚ್ಚಾಗಿ ತಮ್ಮ ಮಾತೃಭಾಷೆಯಲ್ಲೇ ಮಾತನಾಡುವುದು ರೂಢಿ. ಈಗಿನ ಯುವಕ– ಯುವತಿಯರು ಇಂಗ್ಲಿಷ್ ಬಲ್ಲವರಾದರೂ, ಅಂಗಡಿ, ಹೋಟೆಲ್‌ಗಳಲ್ಲಿ ವ್ಯವಹಾರಕ್ಕೆ ಬೇಕಾದ ಇಂಗ್ಲಿಷ್ ರೂಢಿಸಿಕೊಂಡರೂ ಥಟ್ಟನೆ ಅಲ್ಲಿ ಮಾತನಾಡುವುದು ಮ್ಯಾಂಡರಿನ್‌ನಲ್ಲೇ.

ಆಕೆಯಿಂದ ಅಲ್ಲಿಯ ಭಾಷೆಯ ಬಗ್ಗೆ ವಿವರಣೆಯೇನೋ ಸಿಕ್ಕಿತ್ತು. ಆದರೆ ಚೀನಿಯರ

